ಕಥೆ

# ಮುಗಿಲ ಮರೆಯ ಮಿಂಚು



■ ಮಂಡಲಗಿರಿ ಪ್ರಸನ್ನ

ಅದು ಮೊನ್ನೆ ಮೊನ್ನೆ ನಡೆದ ಸಂಗತಿ. 'ಮುಂದಿನ ಸಾರಿಯಾದರೂ ಹುಡುಗನ್ನ ನೋಡಿ ಒಪ್ಕೊಳ್ಳೆ... ನೀನು ಹೀಗೆ ಹುಡುಗ್ರನ್ನ ಆರಿಸ್ತಾ ಹೋದ್ರೆ, ಖಂಡಿತವಾಗಿ ನಿನ್ನ ಮದುವೆ ಆಗಲ್ಲ ಬಿಡು...' ಅಮ್ಮ ನೀಡಿದ್ದ ಎಚ್ಚರಿಕೆಯ ಆ ಮಾತು ತಲೆಯಲ್ಲಿ ಗುಂಗಿ ಹುಳುವಿನಂತೆ ಕೊರೆಯುತ್ತಿತ್ತು ಸೀಮಂತಿನಿಗೆ.

ಹುಡುಗ ನನ್ನನ್ನು ಒಪ್ಪದಿದ್ದರೆ ಏನಾಯ್ತು? ಸೋದರತ್ತೆಯರ ಮದುವೆಯ ನಂತರ ಏನಾಯ್ತು? ಐದು ವರ್ಷಗಳ ಹಿಂದೆ ತನ್ನಕ್ಕ ಕುಮುದಿನಿಯ ಮದುವೆ ನಂತರ ಏನಾಯ್ತು...? ಇಂತಹ ಹತ್ತಾರು ಪ್ರಶ್ನೆಗಳ ಮೇಲೆ ಪ್ರಶ್ನೆಗಳು ಸೀಮಂತಿನಿಯ ತಲೆಯಲ್ಲಿ ಒಂದೇ ಸಮನೆ ತೀವ್ರ ತಿಕ್ಕಾಟ ನಡೆಸಿದ್ದವು. ಹತ್ತಲ್ಲ, ಇನ್ನೂ ಇಪ್ಪತ್ತು ಹುಡುಗರು ಬಂದರೂ ಸರಿ, ತನ್ನ ದೃಷ್ಟಿಕೋನದಲ್ಲಿ ಬದಲಾವಣೆ ಆಗಬಾರದು ಎಂದು ದೃಢವಾಗಿ ನಿರ್ಧರಿಸಿದವಳಂತೆ ಮುಂಬರಲಿರುವ ಸನ್ನಿವೇಶಗಳನ್ನು ಎದುರಿಸಲು ತನ್ನೊಳಗೆ ಮಾನಸಿಕವಾಗಿ ಸಿದ್ಧವಾಗುತ್ತಿದ್ದಳು. ಸೀಮಂತಿನಿಯ ಇಂತಹ ನಿರ್ಧಾರಗಳು, ಆಲೋಚನೆಗಳು ಅವರಮ್ಮ ಶಾರದೆಗೆ ಬೇಸರ ತರುತ್ತಿತ್ತು. ಆದರೂ ಸೀಮಂತಿನಿಯ ಯೋಚನೆಗಳಿಗೆ ಕಡಿವಾಣವೇ ಇರಲಿಲ್ಲ.

ಈಗೀಗ ಸೀಮಂತಿನಿಯ ಯೋಚನೆಗಳಲ್ಲಿ ಹೊಸದೊಂದು ತಿರುವು ಕಂಡಿತ್ತು.

ಈ ಹುಡುಗರಿಗಾದರೂ ಎಷ್ಟು ಸೊಕ್ಕಿದೆ? ಹುಡುಗಿಯರು ಸಿಗುತ್ತಿಲ್ಲ... ಎನ್ನುವ ಹಾಹಾಕಾರದ ನಡುವೆಯೂ, ಈ ಗಂಡುಗಳ ಕೊಬ್ಬು ಇಳಿದಿಲ್ಲ! ಈಗ ಹತ್ತಿಪ್ಪತ್ತು ವರ್ಷಗಳ ಹಿಂದೆ ಹುಡುಗಿಯರು ಮದುವೆಗೆ ಸುಲಭವಾಗಿ ಒಪ್ಪಿದಂತೆ ಇಂದಿನ ದಿನಗಳಲ್ಲಿ ಯಾವ ಹುಡುಗಿಯರು ಅಪ್ಪ–ಅಮ್ಮನ ಮಾತಿಗೆ ಕಟ್ಟುಬಿದ್ದು ವೈವಾಹಿಕ ಸಂಬಂಧಕ್ಕೆ ತೋರಿಸಿದ ಹುಡುಗನನ್ನು ಸುಲಭವಾಗಿ ಒಪ್ಪಿಕೊಳ್ಳುತ್ತಾರೆ? ಓದು, ನೌಕರಿ, ಪ್ಯಾಕೇಜ್ ಇವುಗಳ ಜೊತೆಗೆ ಹುಡುಗ ಮತ್ತು ಹುಡುಗಿಯ ವಯಸ್ಸಿನ ವ್ಯತ್ಯಾಸದಲ್ಲಿ ಒಂದೆರಡು ಮೂರು ವರ್ಷಗಳ ವ್ಯತ್ಯಾಸವನ್ನಷ್ಟೇ ಬೇಡುವ ಆಧುನಿಕ ಜಗತ್ತಿನ ಹುಡುಗಿಯರು ತಮ್ಮದೇ ಕಲ್ಪನೆಯ ಮತ್ತು ಸ್ವತಂತ್ರ ಬದುಕಿಗಾಗಿ ಆಸೆ ಪಡುವುದು ತಪ್ಪೆ? ದಶಕಗಳ ಹಿಂದಿನ ಚಿತ್ರಣ ಹೇಗಿತ್ತು? ಹೀಗೆಲ್ಲ ಅಂದುಕೊಂಡ ಸೀಮಂತಿನಿಗೆ ಮತ್ತೆ ಮತ್ತೆ ನೆನಪಾದದ್ದು ತನ್ನ ಇಬ್ಬರು ಸೋದರತ್ತೆಯರ ಮದುವೆಗಳು.

ಆಗಿನ್ನೂ ಸೀಮಂತಿನಿ ಚಿಕ್ಕವಳು. ಅಪ್ಪ ಸತ್ತು ವರ್ಷಗಳೇ ಕಳೆದಿದ್ದರೂ